b) The agencies entrusted with the execution of these works are ;

1.	Jeeralli	– Mehaboob Ansari
2.	Yallasangi	– Thippaiah S/o Siddaiah
3.	Madyala	– Jaganath Patil
4.	Hadalagi	– Immamsab S/o Mahaboob Sab Donge
5.	Bennisirur	– Basvaraj S/o Siddappa
6.	Jalaki (K)	– Not yet started
7.	Annur	– Not yet started

c) Rs. 3,56,210-00

ಚಿಕ್ಕಬಳ್ಳಾಪುರ ತಾಲ್ಲೂಕಿನಲ್ಲಿ ವಿದ್ಯಾರ್ಥಿ ನಿಲಯಗಳ ಸ್ಥಾಪನೆ

೧೭೬೮. ಶ್ರೀ ಕೆ. ಎಂ. ಮುನಿಯಪ್ಪ (ಚಿಕ್ಕಬಳ್ಳಾಪುರ) —ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿಕ್ಕಬಳ್ಳಾಪುರ ತಾಲ್ಲೂಕಿನ ಹೋಬಳಿ ಕೇಂದ್ರಗಳಾದ ನಂದಿ, ಮಂಡಿಕಲ್ ಗ್ರಾಮಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿ ನಿಲಯಗಳು ಹಾಗೂ ಪೇರ್‌ಸಂದ್ರದಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಲು ಕೋರಿ ಸರ್ಕಾರಕ್ಕೆ ಮನವಿಗಳು ಏನಾದರೂ ಬಂದಿವೆಯೇ ?

ಆ) ಹಾಗಿದ್ದಲ್ಲಿ, ಸರಕಾರದವರು ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಸಚಿವರು).—

ಅ) ಮಂಡಿಕಲ್ ಗ್ರಾಮಕ್ಕೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿನಿಲಯ ಮಂಜೂರು ಮಾಡಲು ಮನವಿ ಬಂದಿದೆ ಪೇರ್‌ಸಂದ್ರಕ್ಕೆ ಹಿಂದುಳಿದ ಹಾಗೂ ಅಲ್ಪ ಸಂಖ್ಯಾತರ ವಿದ್ಯಾರ್ಥಿನಿಲಯ ಮಂಜೂರು ಮಾಡಲು ಮನವಿ ಬಂದಿಲ್ಲ.

ಆ) ೧೯೮೬-೮೭ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು.

ಅಂಗನವಾಡಿ ಯೋಜನೆಯ ಬಗ್ಗೆ

೧೮೦೧. ಶ್ರೀ ಸಿ. ಪಿ. ಮೂಡಲಗಿರಿಯಪ್ಪ (ಶಿರಾ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ತುಮಕೂರು ಜಿಲ್ಲೆ ಶಿರಾ ತಾಲ್ಲೂಕು ಬಹಳ ಹಿಂದುಳಿದ ಪ್ರದೇಶವಾಗಿದ್ದು ಬರಗಾಲಕ್ಕೆ ಶಾಶ್ವತವಾಗಿ ತುತ್ತಾಗಿ ಜನಗಳು ತೊಂದರೆಗಳಿಗಾಗಿರುವುದರಿಂದ ಅಲ್ಲಿ ಅಂಗನವಾಡಿ ಯೋಜನೆಯು ಅವಶ್ಯಕತೆಯಿದೆಯೆಂದು ಯೋಜನಾ ಪಟ್ಟಿಯಲ್ಲಿ ಸೇರಿದಾಗ್ಯೂ ಕಾರ್ಯರೂಪಕ್ಕೆ ತರಲು ವಿಳಂಬವಾಗಲು ಕಾರಣವೇನು ?

ಆ) ಹಾಗಾದರೆ ಬರುವ ಶೈಕ್ಷಣಿಕ ವರ್ಷಗಳಲ್ಲಾದರೂ ಪ್ರಾರಂಭಿಸುವ ಯೋಜನೆ ಸರ್ಕಾರದವರಿಗಿದೆಯೇ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು).—

ಅ) ಸಮಗ್ರ ಬಾಲವಿಕಾಸ ಯೋಜನೆಯು ಶಿರಾ ತಾಲ್ಲೂಕಿನಲ್ಲಿ ಮಂಜೂರಾಗದೆ ಇರುವ ಕಾರಣ ಅಂಗನವಾಡಿಗಳನ್ನು ತೆರೆದಿರುವುದಿಲ್ಲ.

ಆ) ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ಸಮಗ್ರ ಬಾಲವಿಕಾಸ ಯೋಜನೆಯನ್ನು ಶಿರಾ ತಾಲ್ಲೂಕಿನಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ.